ಕೋಲಾರ ಡಿಸ್ಟ್ರಿಕ್ಟ್.

ತಾರೀಖು 21ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ತಪಸೀಲ್‌ವಾರು ಮಾಡಲ್ಪಟ್ಟಿರುವ ರಿಜಿಸ್ಟ್ರಾದ 3 ದಸ್ತ್ಯೆವಜುಗಳು 2 ವರುಷಗಳಿಂದ ಮುಳಬಾಗಲ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಜೇವಾರಸಾಗಿ ನಿಂತಿರುತ್ತೆ. ಬಾದ್ಗೀತೆವುಳ್ಳವರು ಈ ನೋಟಿಫಿಕೇರ್ಷ ತಾರೀಖು ಲಾಗಾಯತು 1 ತಿಂಗಳಲ್ಲಿ ಮುಳಬಾಗಲ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿಯಾದ ಫೀಜ್ ಪಾವತೀವಾಡಿ ಡಿಟೋ ದಸ್ತ್ಯೆವಜುಗಳನ್ನು ವಾಪಸ್ ಪಡಿಯಬಹುದು. ಹಾಗೆ ವಾಯಿದೇ ಒಳಗೆ ಹಾಜರಾದೇ ಹೋದರೆ ಅವುಗಳನ್ನ ಆಕ್ಟಿನ 85ನೇ ಸೆಕ್ಷರ್ಷ ಮೇರಿಗೆ ನಾಶ ಮಾಡಲ್ಪಡುವದು.

ಮುಳಬಾಗಲ್ ಸಬ್ ರಿಜಿಸ್ಟ್ರಿ ಆಫೀಸ್.

ಆಫೀಸ್ ಹೆಸರು.	ಬುಕ್ಕು ನಂಬರ್ ಮತ್ತು ದಸ್ತ್ಯೆವಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ವಗೈರೇ.	ಬರಸಿಕೊಂಡವರ ಹೆಸರು ವಗೈರೇ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ತಪಸೀಲು.
	1ನೇ ನಂಬರ್ ಬುಕ್ಕು 1880-1881ನೇ ಇಸವಿ 72ನೇ ನಂಬರ್.	ಕೋಲಾರ ತಾಲ್ಲೂಕು ಕಾಮಸಂದ್ರದಲ್ಲಿ ಇರುವ ವೈಶ್ಯ ಶ್ರೀಮತಿಪ್ಪನವರು ಚಂಗಲರಾಯಶೆಟ್ಟಿಮಗ ನಾಗಿಶೆಟ್ಟಿ.	ಕೋಲಾರದಲ್ಲಿ ಇರುವ ವೈಶ್ಯ ಬೊಗರಂ ವೆಂಕಟಶಾಮಯ್ಯನ ಮಗ ಲಕ್ಷ್ಮಯ್ಯ	7ನೇ ಡಿಸೆಂಬರ್ 1880	7ನೇ ಡಿಸೆಂಬರ್ 1880	50 ರೂಪಾಯಿನ ಜಮ್ಮಿಕ್ರಯಪತ್ರ.
	ಡಿಟೋ ಬುಕ್ಕು 1881-82ನೇ ಇಸವಿ 79ನೇ ನಂಬರ್.	ಮುಳಬಾಗಲ್‌ನಲ್ಲಿಯಿರುವ ಸ್ಮಾರ್ತ ಬ್ರಾಹ್ಮಣ. ರೇವಣೂರ ವೆಂಕಟನಾರಣಭಟ್ಟರಮಗ ತಿಮ್ಮಣಭಟ್ಟ	ಮುಳಬಾಗಲ್ ತಾಲ್ಲೂಕು ಮುಡಿಯನೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ವೆಂಕಟಸುಬ್ಬಾಶಾಸ್ತ್ರಿಗಳ ಮಗ ವೆಂಕಟೇಶ ಶಾಸ್ತ್ರಿ	17ನೇ ಫೆಬ್ರವರೀ 1882	17ನೇ ಫೆಬ್ರವರೀ 1882	80 ರೂಪಾಯಿನ ವೃತ್ತಿಜಮ್ಮಿಗಳನ್ನು ಆಧಾರಮಾಡಿ ಬರದುಕೊಟ್ಟ ಪತ್ರ.
	ಡಿಟೋ ಬುಕ್ಕು 1882-83ನೇ ಇಸವಿ 17ನೇ ನಂಬರ್.	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ತಿಸಬ್ಬರಿಣ ನವ ದೊಡ್ಡ ಗಂಗಣ್ಣ	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ರಂಗೇಗೌಡನ ಮಗ ವೆಂಕಟಸುಬ್ಬಣ್ಣ	29ನೇ ಜೂನ್ 1882	29ನೇ ಜೂನ್ 1882	190 ರೂಪಾಯಿನ ಜಮ್ಮಿಕ್ರಯಪತ್ರ.

ಬಿ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ನಂ. 7. ತಾರೀಖು 16ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಚಾಮರಾಜನಗರದ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಜೇವಾರಸಾಗಿ ಇರತಕ್ಕ ಕೆಳಗೆ ವಿವರ ಸೋಣಾದ ದಸ್ತಾವೇಜುಗಳನ್ನ ಹಾಜರ್‌ಮಾಡಿದವರೇ ಆಗಲಿ ಅಥವಾ ವಾಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ್ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇರ್ಷ ಆಕ್ಟು 85ನೇ ಸೆಕ್ಷರ್ಷ ಅನುಸರಿಸಿ ಅವುಗಳನ್ನ ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾಪ್ಟದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
31-5-82ಲ್ಲಿ ತಿರಸ್ಕರಿಸಿದ್ದು 1882—83	ಚಾಮರಾಜನಗರದ ತಾಲ್ಲೂಕು ಕಸಬು ಹೊಂಗನೂರು ಗ್ರಾಮದಲ್ಲಿರುವ ಕೊಳೂರು ಲಿಂಗೇಗೌಡ	ಚಾಮರಾಜನಗರ ತಾಲ್ಲೂಕು ಕಸಬು ಹೊಂಗನೂರು ಗ್ರಾಮದಲ್ಲಿರುವ ಉಪ್ಪಲಿಗರ ಜಾತಿ ರಂಗೀಮಗ ಮಾದ	27-5-82	31-5-82	66 ರೂಪಾಯಿನ ಭೂಸ್ಥಿತಿ ಕ್ರಯಪತ್ರ.
1-6-82ರಲ್ಲಿ ತಿರಸ್ಕರಿಸಿದ್ದು 1882—83	ತಲ್ಕಾಡು ತಾಲ್ಲೂಕು ಮೂಗೂರು ಹೋಬಳಿ ಸರ್ವಮಾನ್ಯ ಕೆಂಪನಪುರ ಗ್ರಾಮದಲ್ಲಿರುವ ಕೆಂಗನಪುರದ ಪಾನುಭಾಗ ಶೇಕಂಠಯ್ಯನ ಮಗ ಶಂಕರಪ್ಪ	ಚಾಮರಾಜನಗರ ತಾಲ್ಲೂಕು ಆಲೂರು ಹೋಬಳಿ ಕೆಂಗನಪುರ ಗ್ರಾಮದಲ್ಲಿರುವ ಪಟೇಲ್ ಪುಟ್ಟೇಗವ್ಡ	1-6-82	1-6-82	10 ವರುಷದ ಪಾಯಿದೆ ಉಳ್ಳ ಜಮ್ಮಿ ಸಾಗುವಳಿ ದಸ್ತ್ಕಾವಜು. ವಾಯಿದೆನಂತರ ಬರದುಕೊಟ್ಟವನು ತೆಗದುಕೊಂಡಿರುವ 50 ರೂಪಾಯಿ ವಾಪಸ್ ಕೊಟ್ಟು ಜಮಿನನ್ನ ವಾಪಸ್ ಪಡಿಯತಕ್ಕದ್ದು.

ಅಬ್ದುಲ್ ಖಾದರ್, ಕೆ. ಬಿ.,
ಸಬ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಆಗಸ್ಟ್ 1884.

ಯಡಹಳ್ಳಿ ಆಕ್ಟಿಂಗ್ ಮುನಿಸಿಫ್ ಮತ್ತು ಫಸ್ಟ್ ಕ್ಲಾಸ್ ಮಾಜಿಸ್ಟ್ರೇಟ್ ಬಿ. ವೆಂಕಟಾಚಾರ್ಯರಿಗೆ, 1872ನೇ ಇಸವಿಯ Xನೇ ಆಕ್ಟಿಂ ಬ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 25, (b) ಸೆಕ್ಷನ್ ಅನುಸರಿಸಿ, ಇದರಲ್ಲಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತವೆ :—

1. ಲಾಷ್ ವಿಚಾರಣೆಬಗ್ಗೆ ಅಧಿಕಾರ, (ಸೆಕ್ಷನ್ 135.)
2. ಅವರಿಗೆ ದರ್ಖಾಸ್ತು ಮಾಡುವದಕ್ಕೆ ಅಥವಾ ದರಿಯಾಸ್ತು ಬಗ್ಗೆ ಕಮ್ಮಿಟ್ ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ಫಿರ್ಯಾದುಗಳನ್ನು ದಾಖಲ್ಮಾಡಿಕೆಳ್ಳುವದಕ್ಕೂ ಪೋಲೀಸ್ ರಿಪೋರ್ಟುಗಳನ್ನು ತೆಗದುಕೊಳ್ಳುವದಕ್ಕೂ ಅಧಿಕಾರ, (ಸೆಕ್ಷನ್ 141.)
3. ನಿರೋಧ ವಗೈರೇಯನ್ನು ಅಡ್ಡೀಪಡಿಸುವಂತೆ ಹುಕ್ಕುಂ ಮಾಡುವದಕ್ಕೆ ಅಧಿಕಾರ, (ಸೆಕ್ಷನ್ 518.)
4. ಹೇಸಿಗೆಯು ಬಾರ್‌ಬಾರ್ ನಡಿಯದಂತೆ ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡಲು ಅಧಿಕಾರ (ಸೆಕ್ಷನ್ 519.)

ಮಹ್ಮದಲ್ಲಿ, ಕೆ. ಬಿ.
ಆಫಿಷಿಯೇಟಿಂಗ್ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಸ್ರ 1884ನೇ ಇಸವಿ ಜುಲೈ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ—ಬೆಂಗಳೂರು ಪಟ್ಟಣದಲ್ಲಿ, 1 ಅಂಗುಲ 45 ಸೆಂಟ್ಸ್ ಮಳೆ ಆಗಿರುತ್ತೆ.

ಬೆಳೆಗಳ ಸ್ಥಿತಿ ಮತ್ತು ಕಾಲಸ್ಥಿತಿ—ಡಿಸ್ಟ್ರಿಕ್ಟಿನ ಅನೇಕಭಾಗಗಳಲ್ಲಿ ಈಚಿಗೆ ಬೇರುವಾದ ಬೆಳೆಗಳಿಗೆ ಮಳೆ ಅತ್ಯಾವಶ್ಯಕವಾಗಿರುತ್ತೆ. ರಾಗಿ, ಅವರೆ, ತೊಗರಿ ಮತ್ತು ನೆಲ್ಲು ಯಿವು ಕೆಲವು ಭಾಗದಲ್ಲಿ ಬಿತ್ತಲ್ಪಟ್ಟಿರುತವೆ. ಕಾಲಸ್ಥಿತಿ ಚನ್ನಾಗಿಲ್ಲ, ಆದರೆ ವಂದೆರಡು ಭಾರಿಮಳೆ ಬಂದದ್ದಾದರೆ ಕಾಲಸ್ಥಿತಿ ಅಭಿವೃದ್ಧಿ ಆಗಬಹುದು.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿದೆ.